51

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಬಲ್ಕೀಸ್ ಬಾನು ಇವರು ನಿಯಮ-72ರಡಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ ನೀಡುವ ಬಗ್ಗೆ.**

**ವಿಷಯ**

ಇತ್ತೀಚೆಗೆ ರಾಜ್ಯದಲ್ಲಿ ಬೀದಿ ನಾಯಿ ಹಾವಳಿಗಳ ಸಂಖ್ಯೆ ಹೆಚ್ಚಾಗಿದ್ದು, ಈ ಬಗ್ಗೆ ಸರ್ವೋಚ್ಛ ನ್ಯಾಯಾಲಯ ಕಳವಳ ವ್ಯಕ್ತಪಡಿಸಿದ್ದು, ಇದರೊಂದಿಗೆ ಬೀದಿ ನಾಯಿಗಳಿಗೆ ಆಹಾರ ಹಾಕುವ ಜನರನ್ನೇ ಹೊಣೆಗಾರರನ್ನಾಗಿ ಮಾಡುವಂತೆ ಅನುಷ್ಠಾನಗೊಳಿಸುವ ಬಗ್ಗೆ ಸುಳಿವು ನೀಡಿರುವ ವಿಷಯಕ್ಕೆ ಸರ್ಕಾರ ತೆಗೆದುಕೊಳ್ಳುವ ಕ್ರಮಗಳ ಬಗ್ಗೆ.

**ಉತ್ತರ**

ಬೀದಿ ನಾಯಿಗಳ ನಿಯಂತ್ರಣಕ್ಕಾಗಿ ಪ್ರಾಣಿ ಜನನ ನಿಯಂತ್ರಣ ನಿಯಮಗಳು, 2023 ರೀತ್ಯಾ ಬೀದಿ ನಾಯಿಗಳ ಸಮೀಕ್ಷೆ ಕೈಗೊಂಡು ಸಂತಾನಹರಣ ಚಿಕಿತ್ಸೆ ಮತ್ತು ರೇಬೀಸ್ ಲಸಿಕೆ ನೀಡಲು ಎಲ್ಲಾ ನಗರ ಸ್ಥಳಿಯ ಸಂಸ್ಥೆಗಳಿಗೆ ತಿಳಿಸಲಾಗಿರುತ್ತದೆ. ಅದರ ರೀತ್ಯಾ ನಗರ ಸ್ಥಳೀಯ ಸಂಸ್ಥೆಗಳು ಕೆ.ಪಿ.ಪಿ.ಪಿ ನಿಯಮಗಳನ್ವಯ ಟೆಂಡರ್ ಕರೆದು. ಅರ್ಹ ಏಜೆನ್ಸಿಗಳ ಆಯ್ಕೆ ಮಾಡಿಕೊಂಡು ಬೀದಿ ನಾಯಿಗಳಿಗೆ ಸಂತಾನಹರಣ ಚಿಕಿತ್ಸೆ ಮತ್ತು ರೇಬೀಸ್ ಲಸಿಕೆ ನೀಡುತ್ತಿವೆ. ನಗರ ಸ್ಥಳಿಯ ಸಂಸ್ಥೆಗಳಲ್ಲಿ ಪ್ರಸ್ತುತ ಒಟ್ಟಾರೆ, 1,40,300 ಬೀದಿ ನಾಯಿಗಳಿಗೆ ಸಂತಾನ ಶಕ್ತಿ ಹರಣ ಶಸ್ತ್ರ ಚಿಕಿತ್ಸೆ (ABC) ಮತ್ತು ರೇಬೀಸ್ ರೋಗ ನಿರೋಧಕ ಲಸಿಕೆ (ARV) ನೀಡಲಾಗಿದೆ.

ಈ ಮಧ್ಯೆ ಮಾನ್ಯ ಸರ್ವೋಚ್ಛ ನ್ಯಾಯಾಲಯವು Suo Moto Writ Petition (Civil) No. 5 of 2025 ಪ್ರಕರಣದಲ್ಲಿ ದಿನಾಂಕ: 07.11.2025 ರಂದು ನೀಡಿರುವ ಆದೇಶಗಳಂತೆ, ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರುವ ಶಾಲಾ ಕಾಲೇಜು, ಸರ್ಕಾರಿ ಇಲಾಖೆಗಳ ಆವರಣ, ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ ಇತರೆ ಸಂಸ್ಥೆಗಳಲ್ಲಿರುವ ಬೀದಿ ನಾಯಿಗಳ ಸಮೀಕ್ಷೆ ಮಾಡಿ ಅವುಗಳನ್ನು ಆರೈಕೆ ಕೇಂದ್ರಕ್ಕೆ ಸ್ಥಳಾಂತರಿಸಲು ತಿಳಿಸಲಾಗಿರುತ್ತದೆ ಮತ್ತು ಸದರಿ ಸಂಸ್ಥೆಗಳಲ್ಲಿ ನಾಯಿ ಪ್ರವೇಶಿಸದಂತೆ ಸಂಸ್ಥೆಯ ಪರಿಧಿಯಲ್ಲಿ ಸಮರ್ಪಕ ಬೇಲಿ / ಕಾಂಪೋಂಡ್ ವ್ಯವಸ್ಥೆ ಕಲ್ಪಿಸಲು ತಿಳಿಸಲಾಗಿದೆ. ಸರ್ವೂಚ್ಛ ನ್ಯಾಯಾಲಯವು ನೀಡಿರುವ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಈಗಾಗಲೇ ಮುಖ್ಯ ಕಾರ್ಯದರ್ಶಿಗಳವರಿಂದ ಸುತ್ತೋಲೆ ಹೊರಡಿಸಲಾಗಿದೆ. ಸುತ್ತೋಲೆಯನ್ನು **ಅನುಬಂಧದಲ್ಲಿ** ನೀಡಲಾಗಿದೆ.

ಅದರಂತೆ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳು ತಮ್ಮ ಹಂತದಲ್ಲಿ ಸಮೀಕ್ಷೆ ಕೈಗೊಂಡಿದ್ದು, ರಾಜ್ಯ ವ್ಯಾಪಿ 17,654 ಸಂಸ್ಥೆಗಳಲ್ಲಿ 17,262 ನಾಯಿಗಳನ್ನು ಗುರುತಿಸಲಾಗಿದೆ. ಮತ್ತು 14557 ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿರುತ್ತದೆ. ಬೀದಿನಾಯಿಗಳನ್ನು ಆಶ್ರಯ ತಾಣಗಳಿಗೆ ಸ್ಥಳಾಂತರಿಸಲು Dog shelter / kennels ಗಳ ನಿರ್ಮಾಣ ಮಾಡಲು ಕ್ರಮವಹಿಸಲಾಗುತ್ತಿದೆ. ಇದಕ್ಕಾಗಿ ರೂ. 12.16 ಕೋಟಿಗಳನ್ನು 13 ಮಹಾನಗರಪಾಲಿಕೆಗಳಿಗೆ ಮತ್ತು ರೂ. 21.58 ಕೋಟಿಗಳನ್ನು 301 ನಗರ ಸ್ಥಳೀಯ ಸಂಸ್ಥೆಗಳಿಗೆ ಬಿಡುಗಡೆಮಾಡಲಾಗಿದೆ.

ಕೇಂದ್ರ ಸರ್ಕಾರದ Animal Welfare Board of India ಸಂಸ್ಥೆಯು ಬೀದಿ ನಾಯಿಗಳಿಗೆ ಆಹಾರ ನೀಡುವಿಕೆಗೆ ಪ್ರತ್ಯೇಕ ಮಾರ್ಗಸೂಚಿಯನ್ನು ನೀಡಿದ್ದು, ಅದರಂತೆ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ feeding zone ಗುರುತಿಸಿ ಸದರಿ ಸ್ಥಳದಲ್ಲಿಯೇ ನಾಯಿಗಳಿಗೆ ಆಹಾರ ನೀಡಲು ಕ್ರಮವಹಿಸುವಂತೆ ತಿಳಿಸಲಾಗಿದೆ. ನಗರ ಪ್ರದೇಶಗಳಲ್ಲಿ 2518 dedicated feeding zones ಗಳನ್ನು ಗುರುತಿಸಲಾಗಿದೆ.

ಮಾನ್ಯ ಸರ್ವೋಚ್ಛ ನ್ಯಾಯಾಲಯದ ಪ್ರಕರಣವು ಇನ್ನು ವಿಚಾರಣೆ ಹಂತದಲ್ಲಿದ್ದು, ಘನನ್ಯಾಯಾಲಯವು ನೀಡುವ ಮುಂದಿನ ಆದೇಶದ ಅನುಸಾರ ಸೂಕ್ತ ಕ್ರಮವಹಿಸಲಾಗುವುದು.

ಇ-ಸಂಖ್ಯೆ: ನಅಇ 25 ಜಿಇಎಲ್ 2026 (ಇ)

**( ರಹೀಂ ಖಾನ್ )**
ಪೌರಾಡಳಿತ ಮತ್ತು ಹಜ್ ಸಚಿವರು

ಡಾ. ಶಾಲಿನಿ ರಜನೀಶ್, ಭಾ.ಆ.ಸೇ.,
ಮುಖ್ಯ ಕಾರ್ಯದರ್ಶಿ
Dr. SHALINI RAJNEESH, I.A.S.,
Chief Secretary

ಕರ್ನಾಟಕ ಸರ್ಕಾರ
Government of Karnataka

ಸಂಖ್ಯೆ: ಮುಕಾ/1123961 /2025

ದಿನಾಂಕ: 13-11-2025

:: ಸುತ್ತೋಲೆ ::

ವಿಷಯ: ರಾಜ್ಯದಲ್ಲಿನ ಬೀದಿ ನಾಯಿಗಳ ಹಾವಳಿ ತಡೆಗಟ್ಟುವ ನಿಟ್ಟಿನಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿರುವ ಆದೇಶಗಳ ಅನುಷ್ಠಾನದ ಕುರಿತು.

ಉಲ್ಲೇಖ: ಮಾನ್ಯ ಸರ್ವೋಚ್ಚ ನ್ಯಾಯಾಲಯದ Suo Moto WP(Civil) Nos 5 of 2025 ಪ್ರಕರಣದಲ್ಲಿ ದಿನಾಂಕ: 07.11.2025 ರ ಆದೇಶ.

*****

ಮಾನ್ಯ ಸರ್ವೋಚ್ಚ ನ್ಯಾಯಾಲಯವು Suo Moto WP(Civil) Nos 5 of 2025 ಪ್ರಕರಣದಲ್ಲಿ ದಿನಾಂಕ: 07.11.2025 ರಂದು ನೀಡಿದ ಆದೇಶದ ಪ್ರತಿಯನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿದೆ. ಸದರಿ ಆದೇಶದಲ್ಲಿ, ದಿನಾಂಕ: 22-08-2025 ರ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಮುಂದುವರೆಸುತ್ತಾ, ಹೆಚ್ಚುವರಿಯಾಗಿ ರಾಜ್ಯದ ನಗರಾಭಿವೃದ್ಧಿ ಇಲಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಪಶುಪಾಲನಾ ಮತ್ತು ಪಶುವೈದ್ಯ ಇಲಾಖೆ, ಶಿಕ್ಷಣ ಇಲಾಖೆ, ಸಾರಿಗೆ ಇಲಾಖೆ, ರೈಲ್ವೆ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗಳು ಬೀದಿ ನಾಯಿಗಳ ಹಾವಳಿ ನಿಯಂತ್ರಣಕ್ಕಾಗಿ ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ನಿರ್ದೇಶನಗಳನ್ನು ನೀಡಿರುತ್ತದೆ. ಅದರ ಆಯ್ದ ಭಾಗಗಳು ಕೆಳಕಂಡಂತಿವೆ.



ಕೊಠಡಿ ಸಂಖ್ಯೆ: 320, 3ನೇ ಮಹಡಿ, ವಿಧಾನಸೌಧ, ಬೆಂಗಳೂರು - 560 001, ದೂರವಾಣಿ ಕಛೇರಿ: +91-80-22252442 / 22033300 ಫ್ಯಾಕ್ಸ್: +91-80-22258913
Room No. 320, 3rd Floor, Vidhana Soudha, Bengaluru - 560 001, Phone. off. +91-80-22252442 / 22033300 Fax: +91-80-22258913
E-mail : cs@karnataka.gov.in

ಭಾಗ -1

**ನಗರಾಭಿವೃದ್ಧಿ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ತೆಗೆದುಕೊಳ್ಳಬೇಕಾದ ಕ್ರಮಗಳ ಉದ್ಧೃತ ಕಂಡಿಕೆ.**

*2. The directions contained in the order dated 22nd August, 2025, inter alia, mandated the municipal authorities to continue the exercise of capturing, sterilising, deworming, and vaccinating stray dogs in accordance with the Animal Birth Control Rules, 2023, while permitting the release of sterilised and immunised dogs to the same localities from which they were picked up, except those infected with or suspected to be infected with rabies and those exhibiting aggressive behaviour. The Court further directed the creation of designated feeding zones for stray dogs, establishment of municipal helplines for reporting violations, and the filing of comprehensive compliance affidavits by the respective municipal authorities.*

*The report submitted by the learned Amicus Curiae, Shri Gaurav Agrawal, is taken on record and shall form part of this Order. The Registry is directed to annex the same as Schedule I. The contents of the said report shall be read as part and parcel of thisorder for all purposes. The States and UnionTerritories shall perusethe report and take appropriate steps to address the deficiencies and shortcomings pointed out therein. Each State andUnion Territory shall file comprehensive additional affidavits before the next date of hearing, specifically indicating the remedial measures undertaken to ensure full compliance with this Court's directions and to rectify the lapses highlighted in the report of the learned amicus curiae. Any lethargy in this regard shall be viewed seriously.*

ಭಾಗ -2

**ಬೀದಿ ನಾಯಿಗಳ ನಿಯಂತ್ರಣಕ್ಕಾಗಿ ನಗರಾಭಿವೃದ್ಧಿ ಇಲಾಖೆ, ಸಾರಿಗೆ ಇಲಾಖೆ ಮತ್ತು ಲೋಕೋಪಯೋಗಿ ಇಲಾಖೆಯಿಂದ ತೆಗೆದುಕೊಳ್ಳಬೇಕಾದ ಕ್ರಮಗಳ ಉದೃತ ಕಂಡಿಕೆಗಳು.**

***10 A.*** *The directions issued by the* ***High Court of Rajasthan at Jodhpur in D.B. Civil Writ Petition No. 14726 of 2025 vide order dated 11th August, 2025,*** *are hereby reaffirmed, to the extent that the municipal authorities, road and transport department/Public Works Department of all the States and Union Territories and the National Authority of India (NHAI) shall ensure the removal of all cattle and other stray animals from the State Highways, National Highways, and National Expressways falling within their respective jurisdictions.*

***10 B****. The concerned authorities, i.e., the municipal authorities, the road and transport department/Public Works Department of all the States and Union Territories and the National Highways Authority of India shall undertake a joint, coordinated drive to identify stretches of highways and expressways where stray cattle or animals are frequently found, and shall take immediate steps for their removal and relocation to designated shelters. The cattle and other stray animals so picked up shall be kept in appropriate shelters or Gaushalas/cattle pounds, as the case may be, and provided with all necessary food, water, and veterinary care, in accordance with the provisions of the Prevention of Cruelty to Animals Act, 1960 and the Animal Birth Control (Dogs) Rules, 2023.*

***C.*** *Each authority shall constitute dedicated highway patrol teams and/or assign existing road-safety units for continuous surveillance and immediate response to reports of stray cattle or other animals obstructing the roadways. Such patrols shall function on a 24x7 basis and coordinate with local police stations, veterinary officers, and municipal authorities/Panchayati Raj institutions.*

***D.*** *All National Highways, State Highways, and National Expressways shall have prominently displayed helpline numbers at regular intervals, enabling commuters to promptly report the presence of stray animals or accidents caused thereby. These helplines shall be linked to the control rooms of the local police, National Highways Authority of India, and district administration for real-time redressal and monitoring.*

<u>ಭಾಗ -3</u>

**ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಸಾರಿಗೆ ಇಲಾಖೆಯಿಂದ ತೆಗೆದುಕೊಳ್ಳಬೇಕಾದ ಕ್ರಮಗಳ ನಿರ್ದೇಶನಗಳು ಕೆಳಕಂಡಂತಿರುತ್ತದೆ.**

***25.*** *Having regard to the alarming rise in incidents of dog bites within institutional areas such as educational institutions, hospitals, sports complexes, bus stands/depots (including Inter-State Bus Terminals) and railway stations, this Court deems it appropriate to issue the following directions in the interest of public safety, health, and management of stray dogs: -*

***A.*** *The State Governments and Union Territories shall through their respective local/ municipal authorities, within a period of two weeks, identify all Government and private educational institutions, hospitals (including district hospitals, primary health centres, and medical colleges), public sports complexes or stadia, bus stands/depots (including Inter-State Bus Terminals) and railway stations situated within their territorial limits.*

***B.*** *The administrative heads of the aforesaid institutions shall through their respective local/ municipal authorities, under the overall supervision of the District Magistrate concerned, ensure that the premises are secured by adequate fencing, boundary walls, gates and such other structural or administrative measures as may be necessary to prevent the ingress of stray dogs. The said exercise shall be completed as soon as possible and preferably within a period of 8 weeks from today.*

***C.*** *The management of every educational institution, hospital, sports complex, bus stand/depot (including Inter-State Bus Terminal) and railway station identified under* ***Direction (A)*** *shall designate a Nodal Officer responsible for the upkeep and cleanliness of the premises and for ensuring that stray dogs do not enter or inhabit the campus. The details of the said officer shall be displayed prominently at the entrance and notified to the jurisdictional municipal body/authority.*

***D.*** *The local municipal authorities and panchayats shall carry out regular inspections, at least once in every three months, of all such premises to ensure that no stray dog habitats exist within or in the immediate vicinity of these*

*institutions. Any lapse in this regard shall be viewed seriously, and responsibility shall be fixed upon the concerned municipal officials/administrative authorities.*

***E.*** *It shall be the responsibility of the jurisdictional municipal body/authority to forthwith remove every stray dog found within the premises of an educational institution, hospital (public or private), sports complex, bus stand/depot (including Inter-State Bus Terminal) or railway station and to shift such animal/s to a designated shelter, after due sterilisation and vaccination, in accordance with the Animal Birth Control Rules, 2023. The stray dogs so picked up shall not be released back to the same location from which they were picked up. We have consciously directed the non-release of such stray dogs to the same location from which they were picked up, as permitting the same would frustrate the very effect of the directions issued to liberate such institutional areas from the presence of stray dogs.*

***F.*** *All Government and private hospitals shall maintain a mandatory stock of anti-rabies vaccines and immunoglobulin at all times.*

***G.*** *Every school and educational institution shall be directed by the Ministry of Education, Government of India, to conduct awareness sessions for students and staff on preventive behaviour around animals, first-aid in case of bites, and immediate reporting protocols.*

***H.*** *The management of stadiums and sports complexes shall ensure the deployment of security or ground-keeping personnel specifically tasked with around the clock vigil against the entry or habitation of stray dogs.*

*l. The railway authorities having jurisdiction over the railway stations as well as the State transport corporations and municipal authorities having jurisdiction over bus stands, depots and Inter- State Bus Terminals, shall ensure that such public-transport premises/facilities are effectively secured and maintained so as to prevent the habitation or movement of stray dogs within their premises. Proper waste-management systems shall be implemented to eliminate food sources that attract animals, and regular inspections shall be conducted to detect and address the presence of stray dogs.*

ಮೇಲೆ ವಿವರಿಸಿದಂತೆ ಸಂಬಂಧಪಟ್ಟ ಎಲ್ಲಾ ಇಲಾಖೆಗಳು ಮಾನ್ಯ ಸರ್ವೋಚ್ಚ ನ್ಯಾಯಾಲಯವು ಸ್ವಯಂ ಪ್ರೇರಿತ ಪ್ರಕರಣ ಸಂಖ್ಯೆ: WP(Civil) Nos 5 of 2025 ಪ್ರಕರಣದಲ್ಲಿ ದಿನಾಂಕ: 07.11.2025 ರಂದು ನೀಡಿರುವ ಆದೇಶದಲ್ಲಿನ ಅಂಶಗಳನ್ನು ಪರಿಶೀಲಿಸಿ ಕೂಡಲೇ ಕ್ರಿಯಾಶೀಲರಾಗಿ ಸೂಕ್ತ ಕ್ರಮವಹಿಸಲು ಹಾಗೂ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನಿಗಧಿಪಡಿಸಿದ ಸಮಯದೊಳಗಾಗಿ ಅನುಪಾಲನೆ ಮಾಡಲು ಆಯಾ ಇಲಾಖೆಯ ವರದಿಯನ್ನು ಅಫಿಡವಿಟ್ ಮುಖಾಂತರ ದಿನಾಂಕ: 15.12.2025ರ ಒಳಗಾಗಿ ನೋಡಲ್ ಇಲಾಖೆಯಾದ ನಗರಾಭಿವೃದ್ಧಿ ಇಲಾಖೆ (ಪೌರಾಡಳಿತ) ಇವರಿಗೆ ಕಳುಹಿಸಿ, ಪ್ರತಿಯನ್ನು ಈ ಕಛೇರಿಗೆ ಕಳುಹಿಸತಕ್ಕದ್ದು.

ಅಲ್ಲದೇ, ಮಾನ್ಯ ನ್ಯಾಯಾಲಯವು ಸರ್ಕಾರಿ ಹಾಗೂ ಖಾಸಗಿ ಶೈಕ್ಷಣಿಕ ಸಂಸ್ಥೆಗಳು, ಆಸ್ಪತ್ರೆಗಳು (ಜಿಲ್ಲಾ ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ ವೈದ್ಯಕೀಯ ಕಾಲೇಜುಗಳು ಸೇರಿದಂತೆ), ಸಾರ್ವಜನಿಕ ಕ್ರೀಡಾಂಗಣಗಳು ಅಥವಾ ಕ್ರೀಡಾ ಸಂಕೀರ್ಣಗಳು, ಬಸ್ ನಿಲ್ದಾಣಗಳು, ಬಸ್ ಡಿಪೋಗಳು (ಅಂತರರಾಜ್ಯ ಬಸ್ ಟರ್ಮಿನಲ್‌ಗಳೂ ಸೇರಿದಂತೆ), ರೈಲು ನಿಲ್ದಾಣಗಳು ಇತ್ಯಾದಿ ಸಾರ್ವಜನಿಕ ಪ್ರದೇಶಗಳಲ್ಲಿ ಇರುವ ಎಲ್ಲಾ ಬೀದಿ ನಾಯಿಗಳನ್ನು ಸಂಬಂಧಪಟ್ಟ ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಾಲಿಕೆಗಳು ಸೆರೆಹಿಡಿದು, ಅವುಗಳ ಸಂತಾನಹರಣ ಶಸ್ತ್ರಚಿಕಿತ್ಸೆ

(sterilisation) ಕ್ರಮ ಕೈಗೊಳ್ಳುವಂತೆ ಸಾರ್ವಜನಿಕರ ಸುರಕ್ಷತೆಗೆ ಅಪಾಯವನ್ನುಂಟು ಮಾಡುವುದಿಲ್ಲವೆಂದು ಖಚಿತಪಡಿಸುವ ನಿಟ್ಟಿನಲ್ಲಿ **ನಾಯಿ ಆಶ್ರಯ ಕೇಂದ್ರಗಳಲ್ಲಿ ಇರಿಸಲು** ನಿರ್ದೇಶನ ನೀಡಿರುತ್ತದೆ.

ನಗರ ಸ್ಥಳೀಯ ಸಂಸ್ಥೆಗಳಿಗೆ ಈ ಕಾರ್ಯಾಚರಣೆಯನ್ನು **ಎಂಟು ವಾರಗಳೊಳಗೆ** ಪೂರ್ಣಗೊಳಿಸಲು ಮಾನ್ಯ ಸರ್ವೋಚ್ಚ ನ್ಯಾಯಾಲಯವು ನಿರ್ದೇಶನ ನೀಡಿರುವುದರಿಂದ ನಗರ ಸ್ಥಳೀಯ ಸಂಸ್ಥೆಗಳು ABC ನಿಯಮಾವಳಿಯನ್ವಯ ಈ ಕೆಳಕಂಡ ಕ್ರಮಗಳನ್ನು ನಿಯಮಾನುಸಾರ ಕೈಗೊಳ್ಳುವಂತೆ ಸೂಚಿಸಿದೆ.

**1)** ನಾಯಿ ಹಿಡಿಯುವ ತಂಡವು ಸಂಬಂಧಪಟ್ಟ ಸಾರ್ವಜನಿಕ ಸಂಸ್ಥೆಗಳಿಗೆ ಭೇಟಿ ನೀಡುವ ದಿನಾಂಕ ಮತ್ತು ಸಮಯವನ್ನು ಮುಂಚಿತವಾಗಿ ತಿಳಿಸುವುದು.

**2)** ಸಾರ್ವಜನಿಕ ಸ್ಥಳಗಳಿಂದ ಬೀದಿ ನಾಯಿಗಳನ್ನು ಹಿಡಿದ ನಂತರ ಅವುಗಳಿಗೆ ಆಶ್ರಯ ನೀಡಲು ನಿಗದಿತ ಕಟ್ಟಡ / ಸ್ಥಳಗಳಿಗೆ ಸ್ಥಳಾಂತರಿಸುವುದು.

**3)** ರೇಬೀಸ್ ಪೀಡಿತ ನಾಯಿಗಳನ್ನು ಪ್ರತ್ಯೇಕ ಕಟ್ಟಡ / ಸ್ಥಳಗಳಲ್ಲಿ ನಿರ್ವಹಣೆ ಮಾಡುವುದು.

**4)** ಬೀದಿ ನಾಯಿಗಳನ್ನು ಸಂತಾನಹರಣ ಶಸ್ತ್ರಚಿಕಿತ್ಸೆ (sterilisation) ಗೊಳಿಸುವ ಕುರಿತು, ಪ್ರಾಣಿ ಕಲ್ಯಾಣ ಮಂಡಳಿಯಿಂದ ಮಾನ್ಯತೆ ಪಡೆದ ಎನ್.ಜಿ.ಒ. ಗಳಲ್ಲದೇ ಹೆಚ್ಚಿನ ಸಂಸ್ಥೆಗಳಿಂದ ಪ್ರಸ್ತಾವನೆ ಪಡೆದು ನಿಯಮಾನುಸಾರ ಕ್ರಮವಹಿಸುವುದು.

**5)** ಸಾರ್ವಜನಿಕ ಸ್ಥಳಗಳಲ್ಲಿ ಸಾರ್ವಜನಿಕರು ಬೀದಿ ನಾಯಿಗಳಿಗೆ ಆಹಾರ ನೀಡುವುದನ್ನು ನಿಯಂತ್ರಿಸಲು ಯಾವ ರೀತಿಯ ಮಾನವ ಸಂಪನ್ಮೂಲ ಮತ್ತು ಇತರೆ ಸಂಪನ್ಮೂಲಗಳು ಬೇಕಾಗುತ್ತವೆ ಇತ್ಯಾದಿ ಅಂಶಗಳ ಕುರಿತು ಕ್ರಿಯಾ ಯೋಜನೆಯನ್ನು ರೂಪಿಸಿ, ಇದರೊಂದಿಗೆ ಲಗತ್ತಿಸಿರುವ Google Spread sheet

https://docs.google.com/spreadsheets/d/1NMUVQ6lR5i_cYilgKu63-6YcUHXQpSPsMpOvKWGFTJ4/edit?usp=sharing ನಲ್ಲಿ ಮಾಹಿತಿಯನ್ನು ತುರ್ತಾಗಿ ಒದಗಿಸಲು ಸೂಚಿಸಿದೆ.

**6)** ಉದ್ಯಾನವನಗಳು, ಬಸ್ ನಿಲ್ದಾಣಗಳು, ಆಸ್ಪತ್ರೆಗಳು, ಕಚೇರಿಗಳು ಸೇರಿದಂತೆ ನಗರ ಸಂಸ್ಥೆಗಳು ಗುರುತಿಸಿದ ಎಲ್ಲಾ ಸಾರ್ವಜನಿಕ ಸ್ಥಳಗಳಲ್ಲಿ ಈ ಕುರಿತು ಆದೇಶಗಳನ್ನು ಉಲ್ಲಂಘಿಸುವವರನ್ನು ನ್ಯಾಯಾಂಗ ನಿಂದನೆ ಎಂದು ಪರಿಗಣಿಸಿ, ಪ್ರಸ್ತುತ ನಿಯಮಗಳ ಅಡಿಯಲ್ಲಿ ದಂಡ ವಿಧಿಸಲಾಗುತ್ತದೆ ಎಂಬ ಎಚ್ಚರಿಕೆಯನ್ನು ಪ್ರದರ್ಶಿಸುವಂತೆ ಸೂಚಿಸುವುದು.

ಮುಂದುವರೆದು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಉನ್ನತ ಶಿಕ್ಷಣ, ಆರೋಗ್ಯ, ವೈದ್ಯಕೀಯ ಶಿಕ್ಷಣ, ಕ್ರೀಡೆ, ಸಾರಿಗೆ ಮತ್ತು ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆಗಳ ಕಾರ್ಯದರ್ಶಿಗಳು ಈ ಕೆಳಕಂಡ ಅಂಶಗಳ ಕುರಿತು ಸರ್ಕಾರಿ ಆದೇಶಗಳನ್ನು ಹೊರಡಿಸುವುದು.

**1)** ತಮ್ಮ ವ್ಯಾಪ್ತಿಯಲ್ಲಿರುವ ಎಲ್ಲಾ ಸಂಸ್ಥೆಗಳಿಗೆ ಪ್ರತಿಯೊಂದು ಸಂಸ್ಥೆಯು ತಮ್ಮ ವ್ಯಾಪ್ತಿಯೊಳಗಿನ ಬೀದಿ ನಾಯಿಗಳ ಸಂಖ್ಯೆಯನ್ನು ದಾಖಲಿಸಿಕೊಳ್ಳುವುದು.

**2)** ನಾಯಿಗಳನ್ನು ಹಿಡಿದ ನಂತರ, ಇತರೆ ನಾಯಿಗಳು ಅದೇ ಆವರಣದಲ್ಲಿ ಮತ್ತೆ ಪ್ರವೇಶಿಸದಂತೆ ಬೇಲಿಯನ್ನು ಹಾಕುವ ಜವಾಬ್ದಾರಿಗಳು.

**3)** ಸ್ಥಳೀಯ ಸಂಸ್ಥೆಗಳೊಂದಿಗೆ ಸಮನ್ವಯತೆ ಸಾಧಿಸಲು ಒಬ್ಬ **ಸಮನ್ವಯಾಧಿಕಾರಿಯನ್ನು** ಎಲ್ಲಾ ಸಾರ್ವಜನಿಕ ಸಂಸ್ಥೆಗಳು ನಾಮನಿರ್ದೇಶನ ಮಾಡುವುದು.

ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಕೆಳಕಂಡಂತೆ ಸಮಿತಿಯನ್ನು ರಚಿಸಲಾಗಿದೆ.

| ಕ್ರ. ಸಂ | ಅಧಿಕಾರಿಗಳ ಪದನಾಮ | |
|---|---|---|
| 1 | ಜಿಲ್ಲಾಧಿಕಾರಿಗಳು | ಅಧ್ಯಕ್ಷರು |
| 2 | ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್ | ಸದಸ್ಯರು |
| 3 | ಜಿಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು | ಸದಸ್ಯರು |
| 2 | ಆಯುಕ್ತರು, ಮಹಾನಗರಪಾಲಿಕೆ | ಸದಸ್ಯರು |
| 3 | ಪೌರಾಯುಕ್ತರು/ಮುಖ್ಯಾಧಿಕಾರಿಗಳು | ಸದಸ್ಯರು |
| 4 | ಜಿಲ್ಲಾ ಆರೋಗ್ಯ ಕಲ್ಯಾಣಾಧಿಕಾರಿಗಳು | ಸದಸ್ಯರು |
| 5 | ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ | ಸದಸ್ಯರು |
| 6 | ಯೋಜನಾ ನಿರ್ದೇಶಕರು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ. | ಸದಸ್ಯರು |
| 7 | ಉಪ ನಿರ್ದೇಶಕರು, ಪ್ರಾಥಮಿಕ ಪ್ರೌಢ ಶಿಕ್ಷಣ ಇಲಾಖೆ. | ಸದಸ್ಯರು |
| 8 | ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ | ಸದಸ್ಯರು |
| 9 | ರಿಜಿಷ್ಟ್ರಾರ್, ಸಂಬಂದಿಸಿದ ವಿಶ್ವವಿದ್ಯಾಲಯ | ಸದಸ್ಯರು |
| 10 | ನಿರ್ದೇಶಕರು, ಜಿಲ್ಲೆಯಲ್ಲಿನ ವೈದ್ಯಕೀಯ ವಿಜ್ಞಾನ ಸಂಸ್ಥೆ | ಸದಸ್ಯರು |
| 11 | ಉಪ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ | ಸದಸ್ಯರು |

| | | |
|---|---|---|
| 12 | ವಿಭಾಗೀಯ ನಿಯಂತ್ರಣಾಧಿಕಾರಿಗಳು, ಕ. ರಾ. ರ. ಸಾ. ಸಂ. ಹಾಗು ಇತರೆ ಸಾರಿಗೆ ಸಂಸ್ಥೆಗಳು | ಸದಸ್ಯರು |
| 13 | ಉಪ ನಿರ್ದೇಶಕರು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ | ಸದಸ್ಯ ಕಾರ್ಯದರ್ಶಿಗಳು |

ಅವಶ್ಯವಿದ್ದಲ್ಲಿ, ಜಿಲ್ಲಾಧಿಕಾರಿಗಳು ಇತರೆ ಅಧಿಕಾರಿಗಳನ್ನು ಸಮಿತಿಗೆ ಸೇರಿಸಿಕೊಳ್ಳಬಹುದಾಗಿದೆ. ಜಿಲ್ಲಾ ಮಟ್ಟದ ಸಮಿತಿಯು ಪ್ರತಿ ವಾರ ಸಭೆ ಸೇರಿ ಮಾನ್ಯ ನ್ಯಾಯಾಲಯದ ನಿರ್ದೇಶನಗಳನ್ನು ಅನುಷ್ಠಾನಗೊಳಿಸಿ, ಅನುಪಾಲನಾ ವರದಿಯನ್ನು ದಿನಾಂಕ: 15-12-2025 ರೊಳಗಾಗಿ ಸಲ್ಲಿಸಲು ಕ್ರಮವಹಿಸುವುದು.

ಸರ್ಕಾರದ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ (ಪೌರಾಡಳಿತ) ಇವರು ಸಂಬಂಧಪಟ್ಟ ಎಲ್ಲಾ ಇಲಾಖೆಗಳಿಂದ ಮತ್ತು ಜಿಲ್ಲಾಧಿಕಾರಿಗಳಿಂದ ಅನುಪಾಲನಾ ವರದಿಗಳನ್ನು ಅಫಿಡವಿಟ್‌ಗಳ ರೂಪದಲ್ಲಿ ಪಡೆದು, ಕ್ರೋಢೀಕೃತ ಕರಡು ಅಫಿಡವಿಟ್ ಅನ್ನು ಈ ಕಛೇರಿಗೆ **ದಿನಾಂಕ: 20-12-2025 ರೊಳಗಾಗಿ** ತಪ್ಪದೇ ಸಲ್ಲಿಸುವಂತೆ ಸೂಚಿಸಿದೆ.

(ಸಹಿ)

**(ಡಾ. ಶಾಲಿನಿ ರಜನೀಶ್)**

ಸರ್ಕಾರದ ಮುಖ್ಯ ಕಾರ್ಯದರ್ಶಿ

**ಇವರಿಗೆ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ.
3. ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ.
4. ಸರ್ಕಾರದ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

5. ಸರ್ಕಾರದ ಕಾರ್ಯದರ್ಶಿಗಳು, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ.
6. ಸರ್ಕಾರದ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ.
7. ಸರ್ಕಾರದ ಕಾರ್ಯದರ್ಶಿಗಳು, ಸಾರಿಗೆ ಇಲಾಖೆ.
8. ಸರ್ಕಾರದ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
9. ಸರ್ಕಾರದ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.
10. ಸರ್ಕಾರದ ಕಾರ್ಯದರ್ಶಿಗಳು, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ.
11. ಕಛೇರಿ ಪ್ರತಿ.

ಡಾ. ಶಾಲಿನಿ ರಜನೀಶ್, ಭಾ.ಆ.ಸೇ.,
ಮುಖ್ಯ ಕಾರ್ಯದರ್ಶಿ
Dr. SHALINI RAJNEESH, I.A.S.,
Chief Secretary

ಕರ್ನಾಟಕ ಸರ್ಕಾರ
**Government of Karnataka**

ಸಂಖ್ಯೆ: ಮುಕಾ/11264734/2025

ದಿನಾಂಕ : 17-11-2025

## :: ಸೇರ್ಪಡೆ ಆದೇಶ ::

ಸರ್ಕಾರದ ಸುತ್ತೋಲೆ ಸಂಖ್ಯೆ: ಮುಕಾ/11239611/2025, ದಿನಾಂಕ 13-11-2025 ರಲ್ಲಿ ರಾಜ್ಯದಲ್ಲಿನ ಬೀದಿ ನಾಯಿಗಳ ಹಾವಳಿ ತಡೆಗಟ್ಟುವ ನಿಟ್ಟಿನಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿರುವ ಆದೇಶಗಳ ಅನುಷ್ಠಾನದ ಕುರಿತು ಹೊರಡಿಸಿರುವ ಸುತ್ತೋಲೆಗೆ ಕೆಳಕಂಡ ಕಾಲಮಿತಿಯುಳ್ಳ ಕೋಷ್ಟಕವನ್ನು ಸೇರಿಸಿ ಓದಿಕೊಳ್ಳತಕ್ಕದ್ದು. ಉಳಿದಂತೆ ಸದರಿ ಆದೇಶದಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

TABLE OUTLINING THE DIRECTIVES OF THE SUPREME COURT ISSUED BY ORDER DATED 07.11.2025 IN SUO MOTO W.P. (C) NO. 5 OF 2025)

| Sl. No. | Action | Specific Duty | Concerned Department / Authority | Time frame (As per Order) | Reference | Check Status |
|---|---|---|---|---|---|---|
| 1 | **Identification of Institutional Areas** | Identify all Govt. & Private Educational Institutions, Hospitals (including PHCs/Medical colleges), Sports complexes/stadium, Bus stands/depots (including Interstate Bus Terminals), and Railway Stations within Jurisdiction and count existing stray dogs. | through local / municipal authorities | **Within 2 weeks from 07.11.2025** | Para 25(A) | 21-11-2025 |
| 2 | **Securing Institutional Premises and public places.** | Ensure fencing, boundary walls, gates, and measures to prevent ingress of stray dogs under supervision of District Magistrate. | Administrative Heads of institutions through local / municipal authorities and District Magistrates | **Preferably within 8 weeks from 07.11.2025** | Para 25(B) | 02-01-2026 |

MA-2
Comp 2
GBA

ಕೊಠಡಿ ಸಂಖ್ಯೆ: 320, 3ನೇ ಮಹಡಿ, ವಿಧಾನಸೌಧ, ಬೆಂಗಳೂರು - 560 001, ದೂರವಾಣಿ ಕಛೇರಿ: +91-80-22252442 / 22033300 ಫ್ಯಾಕ್ಸ್: +91-80-22258913
Room No. 320, 3rd Floor, Vidhana Soudha, Bengaluru - 560 001, Phone. off. +91-80-22252442 / 22033300 Fax: +91-80-22258913
E-mail : cs@karnataka.gov.in

| | | | | | | |
|---|---|---|---|---|---|---|
| 3 | **Appointment of Nodal Officer** | Designate a Nodal Officer responsible for cleanliness and prevention of dog entry; display contact details at entrance and notify to Local body. | Heads of Institutions / Management of Educational, Health, Sports, and Transport Premises | **No specific date — immediate implementation advised** | Para 25(C) | Immediate |
| 4 | **Locating suitable land / NGO's for running dog shelters** | - | - | **Within 4 weeks** | - | 05-12-202[illegible] |
| 5 | **Removal & Non-Release of Stray Dogs** | Remove every stray dog found inside institutional premises; sterilize, vaccinate, deworm and **not release back to same location.** | Jurisdictional Municipal Body / Animal Husbandry Department | **Continuous / ongoing** | Para 25(E) | Regularly |
| 6 | **Anti-Rabies Vaccine & Immunoglobulin Stock** | Maintain mandatory stock of Anti Rabies Vaccine and Immunoglobin in all Government hospitals at all times. | Department of Health & Family Welfare | **Continuous / ongoing** | Para 25(F) | Regularly |
| 7 | **Awareness in Educational Institutions** | Conduct awareness sessions for students and staff on preventive behaviour, first aid and reporting protocols. | Department / Ministry of Education; Heads of Educational Institutions | **As directed by Ministry of Education (no fixed date)** | Para 25(G) | Immediate |
| 8 | **Vigil at Sports Complexes & Stadia** | Deploy security / ground staff for 24×7 vigilance against entry or habitation of stray Dogs. | Department of Youth Affairs & Sports / Stadium Management | **Continuous / ongoing** | Para 25(H) | Regularly |

| | | | | | | |
|---|---|---|---|---|---|---|
| 9 | **Control at Bus Stands / Depots** | Secure and maintain premises to prevent dog habitation; implement waste management and periodic inspection. | State Transport Corporations; Municipal Authorities | **Continuous / ongoing** | Para 25(I) | Regularly |
| 10 | **SOPs for Dog-Bite Prevention & Stray Dog Management** | Issue detailed SOPs for management of stray dogs in institutional Premises nationwide. | Animal Welfare Board of India (AWBI) | **Within 4 weeks from 07.11.2025** | Para 25(J) | **05-12-2025** |
| 11 | **Removal of Cattle & Stray Animals from Highways** | Ensure removal of all cattle and stray animals from National/State Highways and Expressways; relocate to designated shelters. | Municipal Authorities; Road & Transport Dept.; PWD | **Ongoing — Compliance affidavit within 8 weeks from 07.11.2025** | Para 10 (A)–(F) | **02-01-2026** |
| 12 | **Constitution of Highway Patrol Teams** | Constitute dedicated highway patrol/road safety units for 24×7 surveillance and coordination with local Police & veterinary officers. | State Transport & Police Departments | **Ongoing — status in 8 weeks from 07.11.2025** | Para 10(C), Para 10(F) | **02-01-2026** |
| 13 | **Display of Highway Helplines** | Install helpline numbers at regular intervals on highways and link to police, NHAI and District administration control rooms. | Road Transport Dept.; District Administration | **Ongoing — report within 8 weeks from 07.11.2025** | Para 10 (D)–(F) | **02-01-2026** |
| 14 | **Compliance Affidavit — States / UTs** | File affidavit showing steps to secure institutional premises, inspection mechanism, and ARV/IG availability. | Chief Secretaries UTs | **Within 8 weeks from 07.11.2025** | Para 28 | **02-01-2026** |

| | | | | | | |
|---|---|---|---|---|---|---|
| 15 | **Quarterly Inspection of Premises** | Conduct regular inspections of institutional premises to ensure no stray dog habitats exist within or nearby; report lapses. | Local Municipal Authorities / Panchayat Raj Institutions | **Every 3 months (Quarterly)** | Para 25(D) | **Quarterly** |

(ಡಾ. ಶಾಲಿನಿ ರಜನೀಶ್)
ಸರ್ಕಾರದ ಮುಖ್ಯ ಕಾರ್ಯದರ್ಶಿ

ಇವರಿಗೆ:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸಸೌಧ
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಒಳಾಡಳಿತ ಇಲಾಖೆ, ವಿಧಾನಸೌಧ
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ
4. ಸರ್ಕಾರದ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ
5. ಸರ್ಕಾರದ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
6. ಸರ್ಕಾರದ ಕಾರ್ಯದರ್ಶಿ, ಪಶುಪಾಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ
7. ಸರ್ಕಾರದ ಕಾರ್ಯದರ್ಶಿ, ಶಿಕ್ಷಣ ಇಲಾಖೆ
8. ಸರ್ಕಾರದ ಕಾರ್ಯದರ್ಶಿ, ಸಾರಿಗೆ ಇಲಾಖೆ
9. ಸರ್ಕಾರದ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
10. ಸರ್ಕಾರದ ಕಾರ್ಯದರ್ಶಿ, ಯುವ ಸಬಲೀಕರಣ ಮತ್ತು ಕ್ರಿಡಾ ಇಲಾಖೆ
11. ಸರ್ಕಾರದ ಕಾರ್ಯದರ್ಶಿ, ಮೂಲ ಸೌಲಭ್ಯ ಅಭಿವೃದ್ಧಿ ಇಲಾಖೆ
12. ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳು
13. ಕಛೇರಿ ಪ್ರತಿ.